<u>ಸಾಕ್ಷಿಯನ್ನು ದಿನಾಂಕ **03-11-2023** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಪಾಟಿ ಸವಾಲು 1 ಮತ್ತು 3 ನೇ ಎದುರುದಾರ ಪರ ಶ್ರೀ ಎನ್ ಎಲ್ ಪಿ ವಕೀಲರಿಂದಃ</u>

ಭೂಸ್ವಾಧೀನವಾದ ಜಮೀನು ಒಟ್ಟು ಜಮೀನು 03 ಎಕರೆ 30 ಗುಂಟೆಯಲ್ಲಿ ಬರುತ್ತಿದ್ದು, ಸರ್ವೇ ನಂಬರನ್ನು ಹೇಳಲು ಆಗುವುದಿಲ್ಲ. ಭೂಸ್ವಾಧೀನವಾದ ಜಾಗೆಯ ಸರ್ವೇ ನಂಬರು ಪಿತ್ರಾರ್ಜಿತ ಸ್ವತ್ತು. ಸರ್ವೇ ನಂಃ32 ರಲ್ಲಿ ಸ್ವಾಧೀನವಾದ ಜಮೀನು ಕಾಳಿ ವರಪ್ರಸಾದ್ ಇವರದ್ದು ಮಾತ್ರ ಇದೆ ಎಂದರೆ ಸಾಕ್ಷಿ ನನ್ನದು ಉತ್ತರಕ್ಕೆ ಇದೆ, ಕಾಳಿ ವರಪ್ರಸಾದ್ ಅವರದ್ದು ದಕ್ಷಿಣಕ್ಕೆ ಇದೆ. 1999-2000 ನೇ ಸಾಲಿನಲ್ಲಿ ಬೀನ್ ಶೇತ್ಕಿ ಮಾಡಿಸಿದ್ದು, 70 ನಿವೇಶನಗಳು ಆಗಿದ್ದವು. ಅವುಗಳಲ್ಲಿ 10 ನಿವೇಶನಗಳನ್ನು ಉಳಿಸಿಕೊಂಡು ಉಳಿಕೆ ಎಲ್ಲಾ ನಿವೇಶನಗಳನ್ನು ಮಾರಾಟ ಮಾಡಲಾಗಿದೆ. ನಾನು ಪ್ರತೀ ನಿವೇಶನ 30X40 ಚ. ಅಡಿ, 2000-2001 ರಲ್ಲಿ ರೂ. 5 ರಿಂದ 6 ಲಕ್ಷಕ್ಕೆ ಮಾರಾಟ ಮಾಡಿದ್ದೇನೆ. ನಾನು ರೂ. 2 ಲಕ್ಷಕ್ಕೆ ನಿವೇಶನ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಭೂಸ್ವಾಧೀನವಾದ ಜಮೀನು ಋಷಮಣಿ ನಗರ. ಋಷಮಣಿ ನಗರದ ಲೇಔಟಿನ ಪ್ರತಿ ನೀಡಿದ್ದೇನೆ. ಭೂಸ್ವಾಧೀನವಾದ ನಿವೇಶನ ಸಂಖ್ಯೆ 60 ಇದೆ. ನಿಪಿ-23 ರಂತೆ ನನ್ನ ನಿವೇಶನ ಕನಕಗಿರಿ-ಗಂಗಾವತಿ ಮುಖ್ಯ ರಸ್ತೆಯಿಂದ 4 ನೇ ಸಾಲಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲಿ ವಾಣಿಜ್ಯ ಕಟ್ಟಡಗಳು ಆಗುತ್ತಿವೆ. ವಾಣಿಜ್ಯ ಕಟ್ಟಡದ ಬಗ್ಗೆ ದಾಖಲಾತಿ ಕೊಟ್ಟಿಲ್ಲ. ನನ್ನ ನಿವೇಶನದ ಉತ್ತರ ದಿಕ್ಕಿಗೆ ಏನು ಸ್ವತ್ತು ಬರುತ್ತದೆ ಅಂತ ಹೇಳಲು ಆಗುವುದಿಲ್ಲ. ಪಶ್ಚಿಮ ದಿಕ್ಕಿಗೆ ಏನು ಸ್ವತ್ತು ಬರುತ್ತದೆ ಅಂತ ಹೇಳಲು ಆಗುವುದಿಲ್ಲ. ಉಳಿದ ಎರಡು ದಿಕ್ಕಿಗೆ ಏನು ಸ್ವತ್ತು ಬರುತ್ತದೆ ಅಂತ ಹೇಳಲು ಆಗುವುದಿಲ್ಲ. ಗಂಗಾವತಿಯಿಂದ ಕೊಪ್ಪಳಕ್ಕೆ ಹೋಗುವ ಮುಖ್ಯ ರಸ್ತೆ ಮತ್ತು ನನ್ನ ನಿವೇಶನಕ್ಕೂ 2 ಕಿ. ಮಿ. ದೂರ ಇದೆ ಎಂದರೆ ಸಾಕ್ಷಿ 1 ವರೆ ಕಿ. ಮೀ. ಆಗುತ್ತದೆ ಎಂದು ನುಡಿಯುತ್ತಾರೆ. ಗಂಗಾವತಿ ಮುಖ್ಯ ಬಸ್ ನಿಲ್ದಾಣದಿಂದ ಭೂಸ್ವಾಧೀನವಾದ ನಿವೇಶನ 4 ಕಿ. ಮೀ. ಅಂತರದಲ್ಲಿದೆ ಎಂದರೆ ಸಾಕ್ಷಿ 2 ವರೆ ಕಿ. ಮೀ. ಇದೆ ಎಂದು ನುಡಿಯುತ್ತಾರೆ. ಕೃಷಿ ಕಾಲೇಜು ನಮ್ಮ ನಿವೇಶನದಿಂದ 1 ಕಿ.ಮೀ. ದೂರದಲ್ಲಿದೆ ಎಂದರೆ ಸಾಕ್ಷಿ 500 ಮೀ. ಅಂತರದಲ್ಲಿದೆ ಎಂದು ನುಡಿಯುತ್ತಾರೆ. ನಮ್ಮ ನಿವೇಶನ ವಸತಿ ನಿವೇಶನ ಎಂದರೆ

ಸರಿ. ನಿಪಿ-20 ಕ್ರಯಪತ್ರದಂತೆ ನಾನೇ ನಿವೇಶನ ಖರೀದಿ ನೀಡಿದ್ದೇನೆ ಎಂದರೆ ಸರಿ. ನಾನು ರೂ. 20 ಸಾವಿರಕ್ಕೆ ಖರೀದಿ ನೀಡಿದ್ದೇನೆ ಎಂದರೆ ಸಾಕ್ಷಿ ರೂ. 20 ಸಾವಿರಕ್ಕೆ ಖರೀದಿ ನೀಡಿಲ್ಲ, ರೂ. 6 ಲಕ್ಷಕ್ಕೆ ಖರೀದಿ ನೀಡಿದ್ದು, ಆದರೆ ಸರಕಾರಿ ಮೌಲ್ಯಕ್ಕೆ ತಕ್ಕಂತೆ ರೂ. 20 ಸಾವಿರ ಖರೀದಿ ಮೌಲ್ಯ ಬರೆಸಿದ್ದೇನೆ ಅಂತ ನುಡಿಯುತ್ತಾರೆ. ನಮ್ಮ ನಿವೇಶನದ ಮೌಲ್ಯ ರೂ. 20 ಸಾವಿರ ಇರುವುದರಿಂದ ಈಗಾಗಲೇ ನೀಡಿರುವ ಪರಿಹಾರ ಹೆಚ್ಚಾಗಿದೆ ಎಂದರೆ ಸರಿಯಲ್ಲ. ನಿಪಿ-21 ಕ್ರಯಪತ್ರದಂತೆ ರೂ. 5 ಸಾವಿರಕ್ಕೆ ಕ್ರಯಪತ್ರ ಆಗಿದೆ ಎಂದರೆ ಸರಿಯಲ್ಲ. ನಿಪಿ-16 ರಿಂದ 18 ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಠಿ ಮಾಡಿದ ಕ್ರಯಪತ್ರಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-52 ರಿಂದ 54 ದಾಖಲಾತಿಗಳನ್ನು ಲೊಕೋಪಯೋಗಿ ಇಲಾಖೆ ಹಾಗೂ ನಗರಸಭೆ ಅಧಿಕಾರಿಗಳೊಂದಿಗೆ ಸೇರಿ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-56 ನನ್ನ ನಿವೇಶನಕ್ಕೆ ಹೊಂದಿಕೊಂಡಿಲ್ಲ ಮತ್ತು ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ.

ಸನ್ 2009 ರಲ್ಲಿ ಭೂಸ್ವಾಧೀನ ಆದಾಗ ಪ್ರತೀ ಚ. ಅಡಿಗೆ ರೂ. 2 ವರೆ ಸಾವಿರ ಇದ್ದು ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**2 ನೇ ಎದುರುದಾರರ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.

<u>ಸಾಕ್ಷಿಯನ್ನು ದಿನಾಂಕ **03-11-2023** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಪಾಟಿ ಸವಾಲು 1 ಮತ್ತು 3 ನೇ ಎದುರುದಾರ ಪರ ಶ್ರೀ ಎನ್ ಎಲ್ ಪಿ ವಕೀಲರಿಂದಃ</u>

ಭೂಸ್ವಾಧೀನವಾದ ಜಮೀನು ಒಟ್ಟು ಜಮೀನು 03 ಎಕರೆ 30 ಗುಂಟೆಯಲ್ಲಿ ಬರುತ್ತಿದ್ದು, ಸರ್ವೇ ನಂಬರನ್ನು ಹೇಳಲು ಆಗುವುದಿಲ್ಲ. ಭೂಸ್ವಾಧೀನವಾದ ಜಾಗೆಯ ಸರ್ವೇ ನಂಬರು ಪಿತ್ರಾರ್ಜಿತ ಸ್ವತ್ತು. ಸರ್ವೇ ನಂಃ32 ರಲ್ಲಿ ಸ್ವಾಧೀನವಾದ ಜಮೀನು ಕಾಳಿ ವರಪ್ರಸಾದ್ ಇವರದ್ದು ಮಾತ್ರ ಇದೆ ಎಂದರೆ ಸಾಕ್ಷಿ ನನ್ನದು ಉತ್ತರಕ್ಕೆ ಇದೆ, ಕಾಳಿ ವರಪ್ರಸಾದ್ ಅವರದ್ದು ದಕ್ಷಿಣಕ್ಕೆ ಇದೆ. 1999-2000 ನೇ ಸಾಲಿನಲ್ಲಿ ಬೀನ್ ಶೇತ್ಕಿ ಮಾಡಿಸಿದ್ದು, 70 ನಿವೇಶನಗಳು ಆಗಿದ್ದವು. ಭೂಸ್ವಾಧೀನವಾದ ಜಮೀನು ಋಷಮಣಿ ನಗರ. ಋಷಮಣಿ ನಗರದ ಲೇಔಟಿನ ಪ್ರತಿ ನೀಡಿದ್ದೇನೆ. ಭೂಸ್ವಾಧೀನವಾದ ನಿವೇಶನ ಸಂಖ್ಯೆ 112 ಇದೆ. ನಿಪಿ-23 ರಂತೆ ನನ್ನ ನಿವೇಶನ ಕನಕಗಿರಿ-ಗಂಗಾವತಿ ಮುಖ್ಯ ರಸ್ತೆಯಿಂದ 1 ನೇ ಸಾಲಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲಿ ವಾಣಿಜ್ಯ ಕಟ್ಟಡಗಳು ಆಗುತ್ತಿವೆ. ವಾಣಿಜ್ಯ ಕಟ್ಟಡದ ಬಗ್ಗೆ ದಾಖಲಾತಿ ಕೊಟ್ಟಿಲ್ಲ. ನನ್ನ ನಿವೇಶನದ ಉತ್ತರ ದಿಕ್ಕಿಗೆ ಪ್ಲಾಟ್ ನಂಃ 111 ನಂತರ ರೈಲ್ವೇ ಹಳಿ ಬರುತ್ತದೆ. ಪಶ್ಚಿಮ ದಿಕ್ಕಿಗೆ ರೈಲ್ವೆ ಹಳಿ ನಂತರ ಶ್ರೀಶೈಲ ಪಬ್ಲಿಕ್ ಸ್ಕೂಲ್ ಇದೆ. ಗಂಗಾವತಿಯಿಂದ ಕೊಪ್ಪಳಕ್ಕೆ ಹೋಗುವ ಮುಖ್ಯ ರಸ್ತೆ ಮತ್ತು ನನ್ನ ನಿವೇಶನಕ್ಕೂ 2 ಕಿ. ಮಿ. ದೂರ ಇದೆ ಎಂದರೆ ಸಾಕ್ಷಿ 1 ವರೆ ಕಿ. ಮೀ. ಆಗುತ್ತದೆ ಎಂದು ನುಡಿಯುತ್ತಾರೆ. ಗಂಗಾವತಿ ಮುಖ್ಯ ಬಸ್ ನಿಲ್ದಾಣದಿಂದ ಭೂಸ್ವಾಧೀನವಾದ ನಿವೇಶನ 4 ಕಿ. ಮೀ. ಅಂತರದಲ್ಲಿದೆ ಎಂದರೆ ಸಾಕ್ಷಿ 2 ವರೆ ಕಿ. ಮೀ. ಇದೆ ಎಂದು ನುಡಿಯುತ್ತಾರೆ. ಕೃಷಿ ಕಾಲೇಜು ನಮ್ಮ ನಿವೇಶನದಿಂದ 1 ಕಿ.ಮೀ. ದೂರದಲ್ಲಿದೆ ಎಂದರೆ ಸಾಕ್ಷಿ 500 ಮೀ. ಅಂತರದಲ್ಲಿದೆ ಎಂದು ನುಡಿಯುತ್ತಾರೆ. ನಮ್ಮ ನಿವೇಶನ ವಸತಿ ನಿವೇಶನ ಎಂದರೆ

ಸರಿ. ನಮ್ಮ ನಿವೇಶನದ ಮೌಲ್ಯ ರೂ. 20 ಸಾವಿರ ಇರುವುದರಿಂದ ಈಗಾಗಲೇ ನೀಡಿರುವ ಪರಿಹಾರ ಹೆಚ್ಚಾಗಿದೆ ಎಂದರೆ ಸರಿಯಲ್ಲ. ನಿಪಿ-21 ಕ್ರಯಪತ್ರದಂತೆ ರೂ. 5 ಸಾವಿರಕ್ಕೆ ಕ್ರಯಪತ್ರ ಆಗಿದೆ ಎಂದರೆ ಸರಿಯಲ್ಲ. ನಿಪಿ-16 ರಿಂದ 18 ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಠಿ ಮಾಡಿದ ಕ್ರಯಪತ್ರಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-52 ರಿಂದ 54 ದಾಖಲಾತಿಗಳನ್ನು ಲೊಕೋಪಯೋಗಿ ಇಲಾಖೆ ಹಾಗೂ ನಗರಸಭೆ ಅಧಿಕಾರಿಗಳೊಂದಿಗೆ ಸೇರಿ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-56 ನನ್ನ ನಿವೇಶನಕ್ಕೆ ಹೊಂದಿಕೊಂಡಿಲ್ಲ ಮತ್ತು ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ.

ಸನ್ 2009 ರಲ್ಲಿ ಭೂಸ್ವಾಧೀನ ಆದಾಗ ಪ್ರತೀ ಚ. ಅಡಿಗೆ ರೂ. 2 ವರೆ ಸಾವಿರ ಇದ್ದು ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಬೀನ್ ಶೇತ್ಕಿ ಆದ ನಂತರ ರೂ. 2 ಲಕ್ಷಕ್ಕೆ ಸನ್ 2003 ರಲ್ಲಿ ಖರೀದಿ ಮಾಡಿದ್ದೇನೆ. ನಮ್ಮ ನಿವೇಶನದ ಅಳತೆ 34X20 ಚ. ಅಡಿ ಇದ್ದು, ರೂ. 2 ಲಕ್ಷಕ್ಕೆ ಖರೀದಿ ಮಾಡಿದ್ದೇನೆ. ಇನ್ನೊಂದು ನಿವೇಶನ ಸನ್ 2005 ರಲ್ಲಿ ಖರೀದಿ ಮಾಡಿದ್ದು, ಅದರ ಅಳತೆ 30X40 ಚ. ಅಡಿ ಇರುತ್ತದೆ. ಅದರೆ ನಿವೇಶನ ಸಂಖ್ಯೆ 10 ಇರುತ್ತದೆ. ಈ ನಿವೇಶನವನ್ನು ರೂ. 2 ಲಕ್ಷಕ್ಕೆ ಖರೀದಿ ಮಾಡಿದ್ದರಿಂದ ಕ್ರಯಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**2 ನೇ ಎದುರುದಾರರ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.